ವಿಷಯ :– ಮಂಡ್ಯ ನಗರದ ಮಹಿಳಾ ಕಾಲೇಜಿನಲ್ಲಿರುವ ಸ್ಥಳದ ಅಭಾವದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 642 (973)

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ನಗರದಲ್ಲಿರುವ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಬಹು ಸಂಖ್ಯೆಯಲ್ಲಿದ್ದು, ಪ್ರಸಕ್ತ ಕೊಠಡಿಗಳ ಸಂಖ್ಯೆ ಕಡಿಮೆ ಇದ್ದು ಸ್ಥಳದ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ವಿದ್ಯಾರ್ಥಿನಿಯರಿಗೆ ಸ್ಥಳದ ಅವಕಾಶ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :–

ಅ) ಬಂದಿದೆ.

ಆ) ಸ್ಥಳಾವಕಾಶ ಒದಗಿಸಲು ಈಗಿರುವ ಕಟ್ಟಡದ ಮೊದಲನೆಯ ಮಹಡಿ ನಿರ್ಮಾಣ ಮಾಡಲು ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಕಳುಹಿಸಿ ಕೊಡಲು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು ಬೆಂಗಳೂರು (ದಕ್ಷಿಣ) ಇವರನ್ನು ಕೋರಲಾಗಿದೆ.

ವಿಷಯ :– ಮಂಡ್ಯ ನಗರದಲ್ಲಿರುವ ಜಿಲ್ಲಾ ಆಸ್ಪತ್ರೆಯಲ್ಲಿ ಹಾಸಿಗೆಗಳ ಸಂಖ್ಯೆ ಹೆಚ್ಚಿಸುವುದು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 643 (974)

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ನಗರದ ಜನಸಂಖ್ಯೆ ಹಾಗೂ ಜಿಲ್ಲೆಯಲ್ಲಿ ಗ್ರಾಮಾಂತರ ಜನಸಂಖ್ಯೆಗಳ ಪ್ರಮಾಣಕ್ಕೆ ಅನುಗುಣವಾಗಿ ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಹಾಸಿಗೆಗಳ ಸಂಖ್ಯೆ ಇಲ್ಲದೆ, ಒಳರೋಗಿಗಳಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸದರಿ ಆಸ್ಪತ್ರೆಯಲ್ಲಿ ಹಾಸಿಗೆ ಸಂಖ್ಯೆಗಳನ್ನು ಹೆಚ್ಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಇ) ಸದರಿ ಜಿಲ್ಲಾ ಆಸ್ಪತ್ರೆಯಲ್ಲಿ ಗ್ಲೂಕೋಸ್ ತಯಾರಿಕಾ ಘಟಕವು ಇನ್ನೂ ಪ್ರಾರಂಭವಾಗದಿರುವು ದಕ್ಕೆ ಕಾರಣಗಳೇನು ?

ಈ) ಈ ಗ್ಲೂಕೋಸ್ ತಯಾರಿಕಾ ಘಟಕ ಯಾವಾಗ ಕಾರ್ಯ ಪ್ರಾರಂಭವಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :–

ಅ) ಬಂದಿದೆ.

ಆ) ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಇ) ಗ್ಲೂಕೋಸ್ ತಯಾರಿಕಾ ಘಟಕವು ದಿನಾಂಕ 14–8–89 ರಂದು ಪ್ರಾರಂಭವಾಗಿದೆ. ಕಳೆದ ಸುಮಾರು 30–45 ದಿನಗಳಿಂದ ನೀರಿನ ಕೊರತೆ, ಯಂತ್ರೋಪಕರಣಗಳ ತೊಂದರೆ ಇತ್ಯಾದಿ ಕಾರಣಗಳಿಂದ ತಯಾರಿಕೆಯು ಸ್ಥಗಿತಗೊಂಡಿದ್ದು, ಇವುಗಳನ್ನು ಸರಿಪಡಿಸಿದ ಕೂಡಲೇ ಘಟಕವು ಕಾರ್ಯ ನಿರ್ವಹಿಸುವುದು.

ಈ) ಆದಷ್ಟು ಬೇಗನೆ.

ವಿಷಯ :– ಆರೋಗ್ಯ ಇಲಾಖೆಯಲ್ಲಿನ ಖಾಲಿ ಪುದ್ದೆಗಳು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 644 (1008)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ) :– ಮಾನ್ಯ ಆರೋಗ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಪುದ್ದೆಗಳ ಸಂಖ್ಯೆ ಎಷ್ಟು ? (ವೈದ್ಯರುಗಳನ್ನು ಸೇರಿ ವಿವರಗಳನ್ನು ನೀಡುವುದು)

ಆ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು):-

ಅ) ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ವೈದ್ಯರುಗಳನ್ನು ಸೇರಿ ಈ ಕೆಳಕಂಡಂತೆ ಇದೆ.

1)	ವೈದ್ಯಾಧಿಕಾರಿಗಳು	460
2)	ಡೆಂಟಲ್ ಸರ್ಜನ್	32
3)	ಫಾರ್ಮಸಿಸ್ಟ್	330
4)	ಟೆಕ್ನೀಷಿಯನ್ಸ್	222
5)	ಖಾಲಕರು	188
6)	ಗ್ರೂಪ್ 'ಡಿ' ನೌಕರರು	2021
7)	ಕಿರಿಯ ಆರೋಗ್ಯ ಸಹಾಯಕರು	307
8)	ಪಾರಾ ಮೆಡಿಕಲ್ ವರ್ಕರ್ಸ್	162
9)	ಪೆಸ್ಟ್ ಇನ್ಸ್‌ಪೆಕ್ಟರ್	397
10)	ಸಾಫ್ ನರ್ಸ್ ಗ್ರೇಡ್-1	79
11)	ನೇತ್ರ ಸಹಾಯಕರು	132
12)	ಅಧೀಕ್ಷಕರು	52
13)	ಪ್ರಥಮ ದರ್ಜೆ ಸಹಾಯಕರು	250
14)	ದ್ವಿತೀಯ ದರ್ಜೆ ಸಹಾಯಕರು	165
	ಒಟ್ಟು :	5201

ಆ) 5201 ವಿವಿಧ ಹುದ್ದೆಗಳು ಖಾಲಿ ಇದ್ದು 2372 ವಿವಿಧ ಹುದ್ದೆಗಳಿಗೆ ಆರ್ಥಿಕ ನಿಬಂಧನೆ ತೆಗೆಯಲಾಗಿದೆ. ಇವುಗಳಲ್ಲಿ ಕೆಲವನ್ನು ಲೋಕಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಇನ್ನೂ ಕೆಲವನ್ನು ನೇಮಕಾತಿ ಸಮಿತಿಗಳ ಮುಖಾಂತರ ಆದ್ಯ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಉಳಿದ ಹುದ್ದೆಗಳ ಬಗ್ಗೆ ಆರ್ಥಿಕ ನಿಬಂಧನೆ ತೆಗೆದ ನಂತರ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ :- ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳನ್ನು ಜಯದೇವ ಹೃದ್ರೋಗ ಸಂಸ್ಥೆಯಂತೆ ಸ್ವಾಯತ್ತ ಸಂಸ್ಥೆಗಳಾಗಿ ಪರಿವರ್ತನೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 646 (1271)

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :- ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಯದೇವ ಹೃದ್ರೋಗ ಸಂಸ್ಥೆಯಂತೆ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳನ್ನು ಸ್ವಾಯತ್ತ ಸಂಸ್ಥೆಗಳಾಗಿ ಪರಿವರ್ತಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆ ಇದೆಯೇ?

ಆ) ಹಾಗಿಲ್ಲದಿದ್ದಲ್ಲಿ ಕೇಂದ್ರ ಸರ್ಕಾರ ಮತ್ತು ಇತರೇ ಸಂಸ್ಥೆಗಳಿಂದ ಸಹಾಯ ಪಡೆದು ಈ ಸಂಸ್ಥೆಗಳನ್ನು ಸರ್ಕಾರ ಸ್ವಾಯತ್ತ ಸಂಸ್ಥೆಗಳಾಗಿ ಪರಿವರ್ತಿಸಲು ಪರಿಶೀಲಿಸುವುದೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು) :-

ಅ) ಇಲ್ಲ.

ಆ) ಹೌದು.